


ಹೆಚ್ಚು ಪ್ರಕರಣಗಳು ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ದಾಖಲಾಗಿದೆ.

ದೀರ್ಘಕಾಲದಿಂದ ಕಂಡುಬಂದಿರುವುದು ಮಕ್ಕಳ ಮೇಲಿನ ಲೈಂಗಿಕ ಶೋಷಣೆ ಪ್ರಕರಣಗಳಲ್ಲಿ, ಮಕ್ಕಳ ಮಾತನ್ನು ಯಾರೂ ನಂಬುತ್ತಿರಲಿಲ್ಲ. ಹಾಗೆಯೇ ವಿವಿಧ ಕಾರಣಗಳಿಂದ ಪೊಲೀಸ್ ಠಾಣೆಯ ತನಕ ಹೋಗುತ್ತಿರಲಿಲ್ಲ. ಅಧ್ಯಯನಗಳು ತೋರುವಂತೆ, ಬಹುತೇಕ ಪ್ರಕರಣಗಳಲ್ಲಿ (ಶೇ.90ರಷ್ಟು) ಮಕ್ಕಳ ಕುಟುಂಬದವರು, ಸಂಬಂಧಿಕರು, ಸ್ನೇಹಿತರು, ತಿಳಿದವರು, ಪರಿಚಿತರು, ನಂಬಿಕಸ್ಥರೇ ಮಕ್ಕಳನ್ನು ಲೈಂಗಿಕವಾಗಿ ಶೋಷಿಸಿರುತ್ತಾರೆ. ಇಷ್ಟೇ ಅಲ್ಲದೆ ಮಕ್ಕಳು ತಮ್ಮ ಮೇಲೆ ಆದ ಶೋಷಣೆಯನ್ನು ಅದು ತೀವ್ರ ಸ್ವರೂಪದಲ್ಲಿ ಆಗಿರದಿದ್ದರೆ ಅಥವಾ ಕಾಣುವಂತೆ ಮಗುವಿಗೆ ದೈಹಿಕ, ಮಾನಸಿಕ ನೋವು, ಗಾಯ ಆಗಿಲ್ಲದಿದ್ದರೆ ತಕ್ಷಣವೇ ಹೇಳುವುದಿಲ್ಲ ಅಥವಾ ಪಾಲಕರಿಗೂ ತಿಳಿಯುವುದಿಲ್ಲ. ಅದು ವರ್ಷಗಟ್ಟಲೆ ತಡವಾಗಿ ಬೆಳಕಿಗೆ ಬರುವುದು, ಇತ್ಯಾದಿಗಳಿಂದಾಗಿ ಶಿಶು/ ಮಕ್ಕಳ ಪೀಡಕರು ಕಾನೂನಿನ ಪರಿಶೀಲನೆಗೆ, ಶಿಕ್ಷೆಗೆ ಒಳಪಡುವುದೇ ಇಲ್ಲ. ಹೀಗಾಗಿ ವರದಿಯಾಗುವ ಅಥವಾ ಪೊಲೀಸ್ ದೂರು ದಾಖಲಾಗುವ ಸಂಖ್ಯೆಗಿಂತಲೂ ಹತ್ತು ಪಟ್ಟು ಹೆಚ್ಚು ಕೃತ್ಯಗಳು ನಡೆಯುತ್ತಿದ್ದರೂ ಅವುಗಳು ಕಾನೂನಿನ ಪರಿಧಿಗೆ ಒಳಪಡುತ್ತಿಲ್ಲ ಎನ್ನಲಾಗಿದೆ.

ಲೈಂಗಿಕವಾಗಿ ಶಿಶು/ಮಕ್ಕಳ ಪೀಡನೆಯ ಸಂದರ್ಭಗಳಲ್ಲಿ ಕುಟುಂಬಗಳ ಹಿರಿಯರು, ಶಾಲೆ, ಹಾಸ್ಟೆಲ್, ಪೂಜಾಸ್ಥಳ, ಆಶ್ರಮ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿಗಳ ವ್ಯವಸ್ಥಾಪಕರು ಮಕ್ಕಳ ದೂರುಗಳನ್ನು ಮೊದಮೊದಲು ಒಪ್ಪಿಕೊಳ್ಳುವುದೇ ಇಲ್ಲ. ಅಥವಾ ಇಂತಹದ್ದು ತಮ್ಮಲ್ಲಿ ಸಾಧ್ಯವೇ ಇಲ್ಲ ಎಂದು ವಾದಿಸಲು ಮುಂದಾಗುತ್ತಾರೆ. ಅಥವಾ ಲೈಂಗಿಕ ಶೋಷಣೆ ತೀವ್ರ ಸ್ವರೂಪದ್ದಾಗಿಲ್ಲದಿದ್ದಲ್ಲಿ ಪ್ರಕರಣವನ್ನು ಅಲ್ಲಿಯೇ ಕೈಬಿಡಲು, ಇಲ್ಲವೇ ಕೃತ್ಯದಲ್ಲಿ ಭಾಗಿಯಾದವರನ್ನು ಕೆಲಸದಿಂದ ತೆಗೆದುಬಿಡುವುದು, ಅಥವಾ ಚಿಕ್ಕಪುಟ್ಟ ಪ್ರಮಾಣದ ಶಿಸ್ತುಕ್ರಮ ಕೈಗೊಳ್ಳುವುದು, ರಾಜಿ ಮಾಡಿಸುವುದು, ಇಲ್ಲವೇ ಏನಾದರೂ ಪರಿಹಾರ ಕೊಡಿಸುವುದು ಅಥವಾ ತೊಂದರೆಗೀಡಾದ ಮಗುವನ್ನು ಸಂಸ್ಥೆ/ಶಾಲೆ ಇತ್ಯಾದಿಗಳಿಂದ ಬಿಡಿಸಿಬಿಡುವುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಾರೆ. ಪರಿಸ್ಥಿತಿ ಶಾಂತ ಮಾಡುತ್ತಾರೆ. ಶಿಶು ಪೀಡನೆಯ ವಿಚಾರ ಬಹಿರಂಗವಾದರೆ ಕುಟುಂಬಗಳು ಒಡೆದು ಹೋಗುತ್ತವೆ. ಸಂಸ್ಥೆಗಳಿಗೆ ಕೆಟ್ಟ ಹೆಸರು. ಇಂತಹುದಕ್ಕೆ ಈ ಮಗು ಕಾರಣವಾಗಿದೆ ಎಂದು ಪುರುಷರೇ ಏಕೆ, ಸಂಸ್ಥೆಯ/ ಕುಟುಂಬದ ಮಹಿಳಾ ಸಂಬಂಧಿಗಳೇ ಇಡೀ ಪ್ರಕರಣವನ್ನು ತಿರುಗಿಸಿಬಿಡಲು ಯತ್ನಿಸುತ್ತಾರೆ. ಆರೋಪ ಮಾಡಿದ ಮಗುವಿನ ಬಾಯಿ ಮುಚ್ಚಿಸುತ್ತಾರೆ. ಶೋಷಣೆ ಮಾಡಿದ ತಂದೆಯೋ, ತಾತನೋ, ಚಿಕ್ಕಪ್ಪ ದೊಡ್ಡಪ್ಪನೋ, ಮಾವನೋ, ಅಣ್ಣನೋ ಅಥವಾ ಅಂತಹ ಸಂಬಂಧಿಗಳು, ಸ್ನೇಹಿತರು, ಪರಿಚಿತರನ್ನು ರಕ್ಷಿಸುತ್ತಾರೆ. ಹಲವು ಸಂದರ್ಭಗಳಲ್ಲಿ ಕುಟುಂಬದ ಮರ್ಯಾದೆ ಬೀದಿಗೆ ಬರುತ್ತದೆಯೆಂದು ಲೈಂಗಿಕ ದೌರ್ಜನ್ಯಕ್ಕೆ ಈಡಾದ ಮಗು ಮತ್ತು ತಂದೆತಾಯಿಯ ಜೊತೆ ಸಂಬಂಧವನ್ನೇ ಮುರಿದುಕೊಂಡು, ಕುಟುಂಬದಿಂದಲೇ ಬಹಿಷ್ಕಾರ ಹಾಕುವಂತಹ ಪರಿಸ್ಥಿತಿ ಸೃಷ್ಟಿಸಿ, ಆಪಾದಿತರಿಗೆ/ಪೀಡಕರಿಗೆ ಇದರ ಬಿಸಿಯೂ ತಟ್ಟದಂತೆ ಕಾಪಾಡುತ್ತಾರೆ.

ಶಾಲಾ ಆರೋಗ್ಯ ಮತ್ತು ಯೋಗಕ್ಷೇಮ ಕಾರ್ಯಕ್ರಮಗಳು ಅಥವಾ ಲೈಂಗಿಕ ಆರೋಗ್ಯ ಶಿಕ್ಷಣದ ಮೂಲಕ 'ಮಕ್ಕಳಿಗೆ ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ' ಕುರಿತು ಅರಿವು ಕೊಟ್ಟ ಮೇಲೆ ಮತ್ತು ವಿಶೇಷವಾಗಿ ತಮಗಾದ ಮುಜುಗರ, ತೊಂದರೆ ಕುರಿತು ಚೈಲ್ಡ್‌ಲೈನ್ 1098ಕ್ಕೆ ದೂರು ಕೊಡಬಹುದು ಎಂಬ ಮಾಹಿತಿ ಪಸರಿಸಿದ ಮೇಲೆ ಶಾಲಾ ವಯಸ್ಸಿನ ಮಕ್ಕಳು ತಮಗಾದ ಲೈಂಗಿಕ ಶೋಷಣೆಗಳನ್ನು ಕುರಿತು ಮಾತನಾಡಲಾರಂಭಿಸಿರುವುದು ಕಂಡು ಬಂದಿದೆ. ಇದು ಮನೆ, ಸಾರ್ವಜನಿಕ ಸ್ಥಳ (ಬಸ್/ರೈಲು ನಿಲ್ದಾಣ, ಜಾತ್ರೆ, ಸಂತೆ, ಅಂಗಡಿ, ಪೂಜಾಸ್ಥಳಗಳು, ಜನ ಸೇರುವ ಕಾರ್ಯಕ್ರಮಗಳು, ಇತ್ಯಾದಿ), ಆಟದ ಮೈದಾನ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ಶಾಲಾ ವಾಹನ, ಸಾರ್ವಜನಿಕ ವಾಹನ, ಶಾಲೆ, ಹಾಸ್ಟೆಲ್, ಮಕ್ಕಳ ಪಾಲನಾ ನಿಲಯಗಳು,

## ಮಕ್ಕಳ ಮುಟ್ಟೋ ಮೊದಲು ಯೋಚಿಸಿ




ಮುದ್ದು ಮಕ್ಕಳೆಂದು ನೀವು ಲಲ್ಲೆಗರೆವಿರಿ
ಅಲ್ಲಿ ಇಲ್ಲಿ ನಮ್ಮ ಮುಟ್ಟಿ ನಕ್ಕು ನಲಿವಿರಿ
ನಿಮ್ಮ ಎಲ್ಲ ಸ್ಪರ್ಶ ನಡೆ ನಮಗೆ ಹಿತವು ಅಲ್ಲ
ಎಲ್ಲ ಮಾತು ನೋಟ ಆಟ ಸರಿ ಬರುವುದಿಲ್ಲ

ಹಸ್ತ ಸ್ಪರ್ಶ ಸಾಕು ನಮ್ಮ ಮುಖವು ಎದೆಯನಲ್ಲ
ಸೊಂಟದಿಂದ ದೂರವಿಡಿ ನಿಮ್ಮ ಮೈಕೈನೆಲ್ಲ.
ನಿಮ್ಮ ಕೆಟ್ಟ ಸ್ಪರ್ಶ ನಮಗೆ ಕೆಂಡ ತಗುಲಿದಂತೆ
ಮನಸು ದೇಹಕಾಗೋ ಗಾಯ ವಾಸಿಯಾಗದಂತೆ.

ಮಕ್ಕಳಿಗೂ ಹಕ್ಕಿದೆ ಕಾಯ್ದೆ ಖಟ್ಲೆ ತಿಳಿದಿದೆ
ದೂರು ಕೊಟ್ರೆ ದುಷ್ಟರಿಗೆ ಸೆರೆವಾಸದ ಶಿಕ್ಷೆಯಿದೆ.
ಪುಟ್ಟ ದೇಹ ಅರಳೋ ಮನಸು ಹೊಸಕಿ ಹಾಕಬೇಡಿ
ಮಕ್ಕಳಿಗೂ ಪ್ರಜೆಗಳಂತೆ ನಿಜ ಗೌರವ ನೀಡಿ

ದೊಡ್ಡವರೆಲ್ಲಾ ಚಿಂತಿಸಿ ನಮ್ಮ ಕಷ್ಟ ಅರಿಯಿರಿ
ಮಕ್ಕಳನ್ನು ಪ್ರೀತಿಸಿ ಪೋಷಿಸಿ ರಕ್ಷಿಸಿ

